I. P. SETS SANCTIONED IN TIPTUR ELECTRIC SUB-DIVISION

*Q.—748. Sri K. P. REVANNASIDDAPPA (Tiptur).—

Will the Government be pleased to state:—

(*a*) the number of I. P. Sets that are sanctioned in Tiptur Electric Sub-Division from 1st January 1960 to 31st May 1961;

(*b*) the number of them that have been executed and connections given;

(*c*) whether it is not a fact that one of the Transformers at Tiptur has been burnt about two years back;

(*d*) whether it is not also a fact that it is not replaced till to-day;

(*e*) whether they will replace it early and arrange to give connections to pump sets already sanctioned?

*A.—Sri M. N. NAGHNOOR (Deputy Minister for Public works).—

(*a*) Estimates for power supply to 89 I. P. sets were sanctioned from 1st January 1960 to 31st May 1961.

(*b*) (1) Executed ... 83 I. P. Sets.

(2) Service connections given ... 82 do

(*c*) Yes.

(*d*) Yes.

(*e*) The Transformer has been repaired and it will be put into service as early as possible.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರಿನವರು ಒಂದು ಟ್ರಾನ್ಸ್‌ಫಾರ್ಮರ್ ಹಾಕಿಸಿ ಕೊಡಬೇಕೆಂದು ಕೇಳಿ ಎರಡುವರ್ಷಗಳಾಯಿತು. ಅದನ್ನು ಹಾಕಿಸಿಕೊಡಲು ಎರಡು ವರ್ಷ ಗಳು ಬೇಕೇ?

†ಶ್ರಿ ಎಂ. ಎನ್. ನಾಗನೂರ್.—ಎರಡು ವರ್ಷ ಬೇಕಾಗಿಲ್ಲ. ಆದರೆ ಕೆಲವು ಪಾರ್ಟ್ಸ್ ಗಳನ್ನು ಪರದೇಶದಿಂದ ತರಬೇಕಾಗಿತ್ತು. ಆದ್ದರಿಂದ ಕೆಲವುಕಾಲ ಬೇಕಾಯಿತು. ಅನಾನು ಕೂಲ ಆಗದ ಹಾಗೆ ನೋಡಿಕೊಂಡು ಅದನ್ನು ಮಾಡಿ ಕೊಡುತ್ತೇವೆ.

Sri J. B. MALLARADHYA.—One of the transformers ಇಂಗ್ಲೆಂಡ್ ಅಮೇರಿಕಾ ದಿಂದ ತರಬೇಕಾಗಿತ್ತೇ?

Sri M. N. NAGHNOOR.—A part of the high tensulator was to be imported from abroad and the difficulty was there.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅದನ್ನು ನೀವು ಇನ್ನೂ ತಯಾರು ಮಾಡುವ ಸ್ಥಿತಿಯು ಲಲ್ಲವೇ?

ಶ್ರೀ ಎಂ. ಎನ್. ನಾಗನೂರ್.—ಇನ್ನು ಮೀತೆ ಅದನ್ನು ತಯಾರು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರಿನಲ್ಲಿ ಗಂಟೆಗೆ 20-30 ಸಲ ಲೈಟು ಹೋಗಿ ಜನಗಳಿಗೆ ತೊಂದರೆಯಾಗುತ್ತಿದೆ ಎಂದು ತಮ್ಮ ಗಮನಕ್ಕೆ ತಂದರೂ ಅದನ್ನು ಇದುವರೆಗೂ ಮಾಡಿಕೊಡದೆ ಇರಲು ಕಾರಣವೇನು?

ಶ್ರೀ ಎಂ. ಎನ್. ನಾಗನೂರ್.—ಈಗಾಗಲೇ ಅದನ್ನು ರಿಪೇರಿ ಮಾಡಿದ್ದಾರೆ ಮತ್ತೆ ಇಕ್ಸಾರ್ ಮಾಡಿ ತೀವ್ರವಾಗಿ ಅದನ್ನು ಸರಿಪಡಿಸಲಕ್ಕೆ ಸಾಧ್ಯವಾಗುತ್ತದೆ. ತಿಪಟೂರಿನಿಂದ ಲೈಟನ್ನು ಹೊಳೆನರಸೀಪುರಕ್ಕೆ ನಪ್ಲೈ ಮಾಡಿ ಅನುಕೂಲ ಮಾಡಿಕೊಟ್ಟಿದ್ದೇವೆ. ಅಲ್ಲಿನ ಜನರಿಗೆ ಯಾವ ತೊಂದರೆಯೂ ಆಗಿಲ್ಲ ಎಂದು ಅಲ್ಲಿಂದ ಮಾಹಿತಿ ಬಂದಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಾನು ತಿಪಟೂರಿನಲ್ಲಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಜನಗಳಿಗೆ ಅನುಕೂಲವಾಗಿಲ್ಲ. ತುಂಬಾ ತೊಂದರೆಯಾಗಿದೆ. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡುತ್ತೀರಾ?

ಶ್ರೀ ಎಂ. ಎನ್. ನಾಗನೂರ್.—ಈಗಾಗಲೇ ಅದು ರಿಪೇರಿ ಆಗಿದೆ. ಆದಷ್ಟು ಬೇಗನೆ ಮಾಡಿಕೊಡುತ್ತೇವೆ.

Sri M. RAMAPPA.—When it was repaired, why service has not been given so fcr?

Sri M. N. NAGHNOOR.—It has been repaired, and it has to be commissioned and dericed immediately and we will do it as early as possible.

Sri C. K. RAJAIAH SHETTY.—Are the Government aware that the Transformer at Tiptur has been Shifted to Cement Factory and the Tiptur circle will be connected to Holenarasipur?

Sri M. N. NAGHNOOR.—That information is not before me that is altogether a different question.

ಶ್ರೀ ಎಚ್. ಜಿ. ನರಸಿಂಹೇಗೌಡ.—ಟ್ರಾನ್ಸ್‌ಫಾರ್ಮರು ಸುಟ್ಟು ಹೋಗಿ, ಸ್ಟ್ರೀಟ್‌ಲೈಟ್ ಮತ್ತು ಮನೆ ಲೈಟು ಮಧ್ಯೆ ಮಧ್ಯೆ ನಿಂತು ಹೋಗಿರುವುದರಿಂದ ರೆವಿನ್ಯೂ ಕಡಿಮೆ ತೆಗೆದ ಕೊಂಡಿದ್ದೀರಾ?

ಶ್ರೀ ಎಂ. ಎನ್. ನಾಗನೂರ್.—ಅಕಸ್ಮಾತ್ತಾಗಿ ನಿಂತು ಹೋಗಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಅಮ್ಮನಂದ್ರದ ಹತ್ತಿರ ಇರುವ ಸಿಮೆಂಟ್ ಫ್ಯಾಕ್ಟರಿಗೆ ಟ್ರಾನ್ಸ್ ಫಾರ್ಮರು ಕೊಟ್ಟು ನಮಗೆ ಅನ್‌ನೆಸೆಸರಿ ಟ್ರಬರ್ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅದು ಗೊತ್ತಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ಕೇಳಿರುವ ಪ್ರಶ್ನೆಗೆ ಉತ್ತರ ಸಿದ್ಧವಾಗಿದೆ ಆ ಪ್ರಶ್ನೆಯ ಮೇಲೆ ಉಪಪ್ರಶ್ನೆ ಕೇಳಬಹುದು ತಿಪಟೂರಿನಲ್ಲಿ ಟ್ರಾನ್ಸ್‌ಫಾರ್ಮರನ್ನು ಹಾಕದೆ ತೊಂದರೆಯಾಗಿರುವುದು ಬೇರೆ ಪ್ರಶ್ನೆ ಆಗುತ್ತದೆ. ಕೈಗಾರಿಕೆಗಳಿಗೆ, ಐ. ಪಿ. ಸೆಟ್ಟುಗಳಿಗೆ, ಬೀದಿ ದೀಪ ಮನೆ ದೀಪ ಇವುಗಳಿಗೆ ಏತಕ್ಕೆ ಎಲೆಕ್ಟ್ರಿಸಿಟಿ ಕೊಡಲಲ್ಲ ? ಏತಕ್ಕೆ ಇಕ್ಷರ್‌ಮೇಷನ್ ತರಿಸಲಲ್ಲ ಎಂದರೆ ಹೇಗೆ ?

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತಿಪಟೂರಿಗೆ ಟ್ರಾನ್ಸ್‌ಫಾರ್ಮರು ಕೊಡದೆ ಇರುವುದರಿಂದ ತೊಂದರೆಯಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಪ್ರಶ್ನೆ ಹಾಕಿದರೆ ಇಕ್ಷರ್‌ಮೇಷನ್ ತರಿಸೋಣ. ಪ್ರಶ್ನೆಯನ್ನು ಕೇಳದೆ ಇನ್‌ಫರ್‌ಮೇಷನ್ ತರಿಸಲಲ್ಲ ಎಂದು ಹೇಳಿದರೆ ಹೇಗೆ ? ನೀವು ಮೊದಲೇ ಈ ಪ್ರಶ್ನೆಯನ್ನು ಕೇಳಿದ್ದರೆ ಇಕ್ಷರ್‌ಮೇಷನ್ ತರಿಸಬಹುದಾಗಿತ್ತು. ನರ್ವೀಸ್ ಕೊಡುವುದು ಬೋರ್ಡ್ ನೀವು ಆ ಪ್ರಶ್ನೆ ಕೇಳಿದ್ದರೆ ಬೋರ್ಡಿನಿಂದ ಇಕ್ಷರ್‌ಮೇಷನ್ ತರಿಸಬಹುದಾಗಿತ್ತು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಬೋರ್ಡ್ ಕಟ್ಟಿಕೊಂಡು ನಾವೇನು ಮಾಡೋಣ. ತಾವು ಅದಕ್ಕೆ ಜವಾಬ್ದಾರರು.

ಅಧ್ಯಕ್ಷರು.—ಪ್ರಶ್ನೆ ಬಂದಿದ್ದರೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.- ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಸಂಬಂಧದಲ್ಲಿ ತಿಪಟೂರು ವಿದ್ಯುಚ್ಛಕ್ತಿ ಸಬ್-ಡಿವಿಜನ್‌ನಲ್ಲಿ 81 ಅರ್ಜಿಗಳು ಮಾತ್ರ ಬಂದಿದೆ ಎಂದು ಹೇಳಿದ್ದೀರಿ. ಅವು ಇನ್ನೂ ಬಾಕಿ ಇವೆ. ಸ್ಥಳದ ಅಧಿಕಾರಿಗಳು ಅವುಗಳಿಗೆ ಹೆಚ್ಚಿಗೆ ನಿಗಾ ಕೊಡುತ್ತಾ ಇಲ್ಲ. ಆದ್ದರಿಂದ ಈಗಾಗಲೇ ಮಂಜೂರು ಮಾಡಿರುವ ಪಂಪು ಸೆಟ್ಟುಗಳಿಗೆ ಅದಷ್ಟು ಬಾಗ್ರತೆ ವಿದ್ಯುಚ್ಛಕ್ತಿಯನ್ನು ಕೊಡುವದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಎನ್. ನಾಗನೂರ್.—ಈಗಾಗಲೇ ನಾವು ಬೇಕಾದಷ್ಟು ಪಂಪು ಸೆಟ್ಟುಗಳಿಗೆ ಮಂಜೂರಾತಿ ಕೊಡುತ್ತಾ ಇದ್ದೇವೆ. ಮತ್ತು ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತಾ ಇದ್ದೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಕೈಜೆನ್‌ಷನ್ ಪವರ್ ಇರುವ ಟ್ರಾನ್ಸ್‌ಫಾರ್ಮರನ್ನು ಪರದೇಶದಿಂದ ತರಿಸುತ್ತೇವೆ ಎಂದು ಹೇಳಿದಿರಿ. ಹಾಗಾದರೆ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಎಷ್ಟು ಟೆನ್‌ಷನ್ ಪವರ್ ಇರುವ ಟ್ರಾನ್ಸ್‌ಫಾರ್ಮರನ್ನು ತಯಾರು ಮಾಡುತ್ತಾ ಇದ್ದಾರೆ. ಇಲ್ಲಿ ಆಗತಕ್ಕದ್ದು ಸಾಕಾಗುತ್ತಾ ಇಲ್ಲವೇ ?

Sri M. N. NAGHNOOR.—I never mentioned that we are not Manufacturing Transformers. I said one of the high tension insulator coil was out of order and that coil has to be imported.

Sri G. N. PUTTANNA.—The question is different and answer is not correct.

ಅಧ್ಯಕ್ಷರು.—ನನಗೆ ಉತ್ತರ ಬರುಲ್ಲ ಎಂದು ಮತ್ತೊಂದು ಪ್ರಶ್ನೆ ಕೇಳಬಹುದು ಸದಸ್ಯರು ಆಪರು ಕೊಡ ವಾದ ಮಾಡುವಂತಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಕೈಜೆನ್‌ಷನ್ ಪವರ್ ಇರುವ ಟ್ರಾನ್ಸ್‌ಫಾರ್ಮರನ್ನು ಪರದೇಶದಿಂದ ತರಿಸಬೇಕು ಎಂದು ಹೇಳಿದರು.....

ಅಧ್ಯಕ್ಷರು.—ಅವರು ಹಾಗೆ ಹೇಳಲಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಈಗ ಎಷ್ಟು ಟೆನ್‌ಷನ್ ಪವರ್ ಇರುವ ಟ್ರಾನ್ಸ್‌ಫಾರ್ಮರನ್ನು ತಯಾರುಮಾಡುತ್ತಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ —ಅದಕ್ಕೆ ಬೇರೆ ಪ್ರಶ್ನೆ ಕೇಳಬೇಕು.

Sri M. RAMAPPA.—I raise a point of order. I want to know when a supplementary is put and that is allowed by the Speaker, whether it is open to the Minister to say that a separate question is to be put.

Sri H. K. VEERANNA GOWDH.—He has not understood me. What I said is, a new notice is to be given. It is a different question altogether.

Mr. SPEAKER.—He says that if he wants to know what part is imported from foreign countries for this purpose, the Deputy Minister has already replied, but if he wants to know what is being manufactured in a certain factory, that is a different question.

Sri C. J. MUCKANNAPPA.—In view of the difficulties experienced by the people of Tiptur, do the Government consider to see that the transformer is supplied as quickly as possible ?

Sri H. K. VEERANNA GOWDH.—I agree. Here it is said 'as early possible.'

ಶ್ರೀ ಕೆ. ಪುಟ್ಟಸ್ವಾಮಿ.—2 ವರ್ಷಗಳ ಕಾಲ ಟಾನ್ಸ್‌ಫಾರ್ಮರ್ ರಿಪೇರಿ ಆಗದೇ ಇತ್ತಲ್ಲಾ ಆ ಒಂದು ಕಾಲದಲ್ಲಿ ಅಲ್ಲಿಗೆ ಹೊಸ ಟಾನ್ಸ್‌ಫಾರ್ಮರ್ ಕೊಡುವುದಕ್ಕೆ ಏನಾದರೂ ಪ್ರಯತ್ನ ಇತ್ತೇ ?

Sri M. N. NAGHNOOR.—The transformer was supplied, but the load weight to be borne by Tiptur Sub-Division was trasnfe red to Holenarasipur sub-division and Government has done its best to see that the public was not inconvenienced.

Sri K. PUTTASWAMY.—Am I to understand that even though the transformer could not be repaired within the time the public were not inconvenienced and the new demands of the public were also met ?

Sri M. N. NAGHNOOR.—The information before me is that the public were not at all inconvenienced because the load of Tiptur Sub-Division was borne by Holenarsipur Sub-Division for the time being.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಬ್ಲಿಕ್‌ಗೆ ತೊಂದರೆ ಆಗಿಲ್ಲ ಎಂದು ಹೇಳುತ್ತೀರಿ. ನಾನು ಅಲ್ಲಿಯ ರೆಪ್ರಸೆಂಟೇಟೀವ್. ಈ ಪ್ರಶ್ನೆಗೆ ಹಾಕಬೇಕಾದರೆ ಅದಕ್ಕೇನೂ ಬೆಲೆ ಇಲ್ಲ ಎಂದು ಅರ್ಥವೇ ?

ಅಧ್ಯಕ್ಷರು.—ಪ್ರಶ್ನೆ ಕೇಳಿ ನೀವು ಹಾಗೆನ್ನಾ ಕಾಂಟರ್ ಆರ್ಗ್ಯುಮೆಂಟ್ ಮಾಡಬೇಡಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಮಪ್ಲಪಕ್ಷ 20 ಸಾವಿರ ಕ್ಯಾಟ್ ಹೊಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎನ್. ನಾಗನೂರ್.—ಇನ್ನೂವರೆಗೂ ಅಂಥ ಯಾವ ವರ್ತಮಾನವೂ ನಮಗೆ ಬಂದಿಲ್ಲ.

SURVEY REGARDING RURAL COMMUNICATION ROADS IN THE STATE

*Q.—761. Sri M. M. PATEEL.—(Hadagalli)

Will the Government be pleased to state :—

(*a*) whether any survey has been made by the Government regarding Rural Communication Roads in the State ;

(*b*) if so, the number of villages in Bellary District which are not still provided with roads (Taluk-wise information may be furnished) ?